## <u>ಮಧ್ಯಂತರ ಅರ್ಜಿ ಸಂಖ್ಯೆ **4** ರ ಮೇಲಿನ ಆದೇಶ</u>

ಪ್ರತಿವಾದಿಯು ಪ್ರಸ್ತುತ ದಾವೆಯಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 8 ನಿಯಮ 1(ಎ) ಮತ್ತು ಕಲಂ.151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 4 ನ್ನು ತನ್ನ ದಾಖಲಾತಿಗಳ ಯಾದಿಯನ್ನು ಹಾಜರುಪಡಿಸಲು ಸಲ್ಲಿಸಿರುತ್ತಾರೆ.

ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯು ಮಧ್ಯಂತರ ಅರ್ಜಿಯ ಜೊತೆಗೆ ತನ್ನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ತನ್ನ ಪ್ರಮಾಣ ಪತ್ರದಲ್ಲಿ ತಾನು ಪ್ರತಿವಾದಿಯಾಗಿದ್ದು, ಹಾಗೆಯೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕೆಲವೊಂದು ಮಹತ್ವದ ದಾಖಲಾತಿಗಳು ಮತ್ತು ಕೆಲವು ದೃಢಿಕೃತ ನಕಲು ಪ್ರತಿಗಳು ಲಭ್ಯವಾಗಿದ್ದರಿಂದ ತಮ್ಮ ಪ್ರಕರಣಕ್ಕೆ ಅನುಕೂಲವಾಗುವ ಸಲುವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸುವುದು ಅತೀ ಅವಶ್ಯವಾಗಿರುತ್ತದೆ ಹಾಗೂ ಸದರಿ ದಾಖಲಾತಿಗಳನ್ನು ಹಾಜರುಪಡಿಸುವುದರಿಂದ ವಾದಿಯವರಿಗೆ ಯಾವುದೇ ರೀತಿಯಿಂದ ನಷ್ಟ ಉಂಟಾಗುವುದಿಲ್ಲ ಮತ್ತು ಸದರಿ ದಾಖಲಾತಿಗಳಿಂದ ದಾವೆಯನ್ನು ನಿರ್ಧರಿಸಲು ಸಹಕಾರಿ ಆಗಿರುತ್ತದೆ. ಹಾಗಾಗಿ ನ್ಯಾಯಾಲಯವು ನ್ಯಾಯಾದ ಹಿತದೃಷ್ಟಿಯಿಂದ ಅನುಮತಿ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

ವಾದಿ ಪರ ವಕೀಲರು ಪ್ರಸ್ತುತ ಅರ್ಜಿಗೆ ಸಂಬಂಧಿಸಿದಂತೆ ತಕರಾರನ್ನು ಸಲ್ಲಿಸಿದ್ದು ತಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿಯು ನ್ಯಾಯಾದ ದೃಷ್ಟಿಯಿಂದ ಮ್ಯಾನವಾಗಿರುವುದಿಲ್ಲ. ಪ್ರತಿವಾದಿಯು ಮಧ್ಯಂತರ ಅರ್ಜಿಯ ಜೊತೆಗೆ ಹಾಜರುಪಡಿಸಿರುವ ದಾಖಲಾತಿಗಳು ದಾವೆಯನ್ನು ಇತಾರ್ಥ ಮಾಡಲು ಸಹಕಾರಿಯಾಗಿರುವುದಿಲ್ಲ. ಪ್ರತಿವಾದಿಯು ಸದರಿ ದಾಖಲಾತಿಗಳನ್ನು ಈ ದಾವೆಯಲ್ಲಿ ಈಗಾಗಲೇ ಹಾಜರುಪಡಿಸಿರುತ್ತಾರೆ. ಆದರೂ ಸಹ ಪ್ರತಿವಾದಿಯು ನ್ಯಾಯಾಲಯದ ಸಮಯವನ್ನು ವ್ಯರ್ಥಮಾಡಲು ಸದರಿ ಅರ್ಜಿಯನ್ನು ಸಲ್ಲಿಸಿರುವುದರಿಂದ ತೀರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಿಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಹೂಡಿರುತ್ತಾರೆ. ಸದರಿ ದಾವೆಯು ಪ್ರತಿವಾದಿಯ ಮುಖ್ಯ ವಿಚಾರಣೆಯ ಹಂತದಲ್ಲಿ ಇರುತ್ತದೆ. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1(ಎ) ರಡಿಯಲ್ಲಿ ಪ್ರತಿವಾದಿಯು ತಾನು ಹಾಜರುಪಡಿಸಲು ಬಯಸುವ ದಾಖಲಾತಿಗಳನ್ನು ತನ್ನ ಪ್ರತಿವಾದ ಪತ್ರವನು ಹಾಜರುಪಡಿಸುವುದರ ಜೊತೆಗೆ ದಾಖಲಾತಿಗಳ ಪಟ್ಟಿಯನ್ನು ಮತ್ತು ದಾಖಲಾತಿಗಳನ್ನು ಹಾಜರುಪಡಿಸಬೇಕು ಎಂದಿದೆ. ಹಾಗೇನ್ನಾದರು ಆ ಸಮಯದಲ್ಲಿ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರೆ ಸದರಿ ದಾಖಲಾತಿಗಳು ಯಾರ ಸ್ವಾಧೀನದಲ್ಲಿ ಇದೆ ಮತ್ತು ಸದರಿ ದಾಖಲಾತಿಗಳನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಲು ಸಾಧ್ಯವಾಗಿರುವುದಿಲ್ಲ ಎನ್ನುವ ಕಾರಣಗಳನ್ನು ತನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಬೇಕು. ಆದರೆ ಪ್ರತಿವಾದಿಯು ಸದರಿ ದಾಖಲಾತಿಗಳನ್ನು ಪ್ರಸ್ತುತ ದಾವೆಯಲ್ಲಿ ತನ್ನ ಪ್ರತಿವಾದ ಪತ್ರವನ್ನು ಹಾಜರುಪಡಿಸುವ ಸಮಯದಲ್ಲಿ ಕಾರಣಗಳನ್ನು ಮತ್ತು ತನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ಆದರೂ ಸಹ ನ್ಯಾಯಾದ ಹಿತದೃಷ್ಟಿಯಿಂದ ಮತ್ತು ಪ್ರಕರಣದ ದ್ವಿಗುಣಿಕರಣವನ್ನು ತಪ್ಪಿಸುವುದಕ್ಕಾಗಿ ಪಕ್ಷಗಾರರಿಗೆ ತಮ್ಮ ದಾವೆಯನ್ನು ಸಾಬೀತು ಪಡಿಸಲು ಅವಕಾಶ ನೀಡುವುದು ಅವಶ್ಯವಾಗಿರುತ್ತದೆ. ಹಾಗಾಗಿ ಪ್ರತಿವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ನ್ಯಾಯಾದ ಹಿತ ದೃಷ್ಟಿಯಿಂದ ಅನುಮತಿ ನೀಡುವುದು ಅವಶ್ಯಕವಾಗಿರುವುದರಿಂದ ಪ್ರತಿವಾದಿಯವರು ತಾನು ಹಾಜರುಪಡಿಸಲು ಅನುಮತಿ ಕೇಳಿದ ದಾಖಲಾತಿಗಳು ತನ್ನ ದಾವೆಯನ್ನು ಸಾಬೀತುಪಡಿಸಲು ಮತ್ತು ಪ್ರಸ್ತುತ ದಾವೆಯನ್ನು ನಿರ್ಧರಿಸಲು ಸದರಿ ದಾಖಲಾತಿಗಳು ಸಹಕಾರಿಯಾಗುವುದರಿಂದ ಪ್ರತಿವಾದಿಯು ಹಾಜರುಪಡಿಸಿದ ದಾಖಲಾತಿಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಸಿ ನೋಡಿದಾಗ ಪ್ರಸ್ತುತ ಅರ್ಜಿಗೆ ಅನುಮತಿಯನ್ನು ನೀಡುವುದು ಅವಶ್ಯವಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಹಾಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

ಆದೇಶ

ಪ್ರತಿವಾದಿಯು ದಿವಾಣಿ ಪ್ರಕ್ರಿಯ ಸಹಿತೆಯ ಕ್ರಮಾದೇಶ **8** ನಿಯಮ **1(ಎ)** ಮತ್ತು ಕಲಂ.

**151** ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ **4** ನ್ನು ರೂ.**300/-**ವೆಚ್ಚದೊಂದಿಗೆ ಅನುಮತಿಸಲಾಗಿದೆ.

ಪ್ರತಿವಾದಿಯು ತನ್ನ ದಾಖಲಾತಿಗಳ ಪಟ್ಟಿಯ ಜೊತೆಗೆ ಹಾಜರುಪಡಿಸಿದ **1** ರಿಂದ **5** ದಾಖಲಾತಿಗಳನ್ನು ನ್ಯಾಯಾಲಯವು ಹಾಜರುಪಡಿಸಲು ಅನುಮತಿಸಲಾಗಿದೆ.

ಪ್ರತಿವಾದಿಯ ಮುಖ್ಯ ವಿಚಾರಣೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ರೋಣ.